ಲಹರಿ

# ಸಣ್ ಮಕ್ಕಳ ಅಡ್ಜಸ್ಟ್‌ಮೆಂಟುಗಳು

**ಪೀಳಿಗೆಯಿಂದ ಪೀಳಿಗೆಗೆ ಮಕ್ಕಳ ವರ್ತನೆಗಳೂ ಅವರನ್ನು ಬೆಳೆಸುವ ಜಗತ್ತುಗಳೂ ಬದಲಾಗುತ್ತಲೇ ಹೋಗುತ್ತವೆ. ಆದರೆ ಜಗತ್ತು ಎಷ್ಟೇ ಬದಲಾದರೂ ನಾವು ಕಳೆದ ಬಾಲ್ಯ ಪ್ರಪಂಚ ಮಾತ್ರ ನಮ್ಮೊಳಗೆ ಹಸಿರಾಗಿಯೇ ಇರುತ್ತದೆ. ನೆನಪಿನ ಮಾಲೆಯಾಗಿ ಹೊರಬರಲು ಸಣ್ಣ ನೆಪಕ್ಕಾಗಿ ಹಪಹಪಿಸುತ್ತಿರುತ್ತದೆ. ಅಂಥದ್ದೇ ಒಂದು ನೆಪದ ಊರುಗೋಲಿನಲ್ಲಿ ಜೀಕಿದ, ಕನ್ನಡ ಸಿನಿಮಾ ಲೇಖಕ ಮಾಸ್ತಿ ಅವರ ಬಾಲ್ಯದ ನೆನಪುಗಳ ಲಹರಿ ಇಲ್ಲಿದೆ.**



ಕಲೆ: ವಿ. ದರ್ಶನ್

ಈಗಿನ ಮಕ್ಕಳು ಯಾರ್ ಮಾತನ್ನೂ ಕೇಳಲ್ಲ, ಯಾರಿಗೂ ಅಡ್ಜಸ್ಟ್ ಆಗಲ್ಲ, ಅವರಮ್ಮನ್ನ ಬಿಟ್ಟು ಹತ್ತು ನಿಮಿಷಾನೂ ಇರಲ್ಲ, ಅಯ್ಯೋ ಹಟ ಅಂದ್ರೆ ಹಟ, ಬೇಕು ಅಂದಿದ್ದು ಬೇಕು ಎಂಬಿತ್ಯಾದಿ ಮಾತುಗಳನ್ನು ಯಾರಾದ್ರು ಮಾತಾಡ್ತಿರೋದು ನಮ್ಮ ಕಿವಿಗೆ ಬಿದ್ರೆ ನಮ್ಮ ಬಾಲ್ಯ ನೆನಪಾಗುತ್ತೆ.

ಮನೆಯ ಹಾಲಲ್ಲೇ ಹಾಸಿದ ಚಾಪೆ ಅದರ ಮೇಲೆ ನೀಲಿ ಕೆಂಪು ಪಟ್ಟೆಯ ಮಾಸಿದ ಜಮಖಾನ, ಹಳೆಯ ತೇಪೆ ಹಾಕಿದ ಸೊಳ್ಳೆಪರದೆ. ಅದರ ದಾರಗಳನ್ನು ಮನೆಯ ಎಲ್ಲಾ ಮೂಲೆಗಳಿಗೂ ಕಟ್ಟಿ ಒಂದು ಬಾಕ್ಸ್ ಥರ ಸೆಟ್ ಮಾಡಿ ಅದರ ಒಳಗಡೆ ಎಲ್ಲರೂ ಒಟ್ಟಿಗೆ ಮಲಗುತ್ತಿದ್ದೆವು. ಒಣಗೋಗಿರೋ, ಅಲ್ಲಲ್ಲಿ ಬಾಯ್ಬಿಟ್ಕೊಂಡಿರೋ ಅರ್ಧ ಹತ್ತಿ ಅರ್ಧ ನಾರಿನ ಹಾಸಿಗೆ ಮನೆಯಲ್ಲಿದ್ದರೂ ಅದನ್ನು ನಮಗೆ ಮಲಗಲು ಹಾಸುತ್ತಿರಲಿಲ್ಲ. ಅದರ ಮೇಲೆ ಉಚ್ಚೆ ಮಾಡಿಬಿಡುತ್ತೇವೆಂದು ಅದನ್ನು ಮಡಚಿ ಸಜ್ಜೆ ಮೇಲೆ ಇಡುತ್ತಿದ್ದರು. ಯಾರಾದರೂ ನೆಂಟರು ಬಂದಾಗಲಷ್ಟೇ ಅದು ಕೆಳಗೆ ಇಳಿಯುತ್ತಿದ್ದದ್ದು. ಮೂರು ಜನರಿಗೆ ಒಂದು ಬೆಡ್‌ಶೀಟು ಹೊದ್ದುಕೊಂಡು ಪುಟ್ಟ ಪಿಳಿಪಿಳಿ ಕಣ್ಣುಗಳಲ್ಲಿ ಮನೆಯ ಮೇಲ್ಛಾವಣಿ ನೋಡಿಕೊಂಡು ಬೆಳಗಿನಿಂದ ಮಾಡಿದ ಕೆಲಸಗಳ, ತಿಂದ ತಿಂಡಿಗಳ, ಓದಿದ ಪಾಠಗಳ, ಆಡಿದ ಆಟಗಳ ಮೆಲುಕು ಹಾಕುತ್ತಾ ಗುಸುಗುಸು ಪಿಸುಪಿಸು ಮಾತುಗಳು... 'ಈಗ ಮುಚ್ಕೊಂಡು ಮಲಗಿದರೆ ಸರಿ' ಎಂಬ ಆವಾಜ್ ಕಿವಿಗೆ ಬೀಳೋವರೆಗೂ ಮಲಗುತ್ತಿರಲಿಲ್ಲ. ಆಮೇಲೆ ಅರಿವಿಲ್ಲದ ನಿದ್ದೆ...

ಬೆಳಿಗ್ಗೆ, 'ಬೆಳಗಾಯ್ತು ಎದ್ದೇಳೋ, ಸ್ಕೂಲಿಗೆ

